
# ಮುಳ್ಳುಹಂದಿಯ ಮುಂಜಾನೆ ಕಥೆ, ವ್ಯಥೆ

ತಡರಾತ್ರಿಯಲ್ಲೂ ಊರಿನ ರಸ್ತೆಯಲ್ಲಿ ಎಡಬಿಡದೇ ಸಂಚರಿಸುವ ವಾಹನಗಳು ಅನೇಕ ನಿಶಾಚರಿ ಪ್ರಾಣಿಗಳ ಜೀವಕ್ಕೆ ಅಪಾಯ ತರುತ್ತಿರುವುದು ಹೆಚ್ಚುತ್ತಲೇ ಇದೆ. ಎಂದಿನಂತೆ ನಸುಕಿನಲ್ಲಿ ಎದ್ದು ರಸ್ತೆಯಲ್ಲಿ ವಾಕಿಂಗ್ ಹೊರಟೆ. ಊರು ದಾಟಿ ಕಾಡುಬೆಟ್ಟದ ಅಂಚಿನ ರಸ್ತೆಗೆ ತಲುಪಿದ್ದೆ. ಡಾಂಬರ್ ರಸ್ತೆಯ ತುಂಬೆಲ್ಲ ಚೂಪಾದ ಮುಳ್ಳುಗಳು ಹರಡಿದ್ದವು. ಹತ್ತಿರ ಹೋಗಿ ಗಮನಿಸಿದರೆ ಅವೆಲ್ಲಾ ಮುಳ್ಳುಹಂದಿಯ ಮೈಮೇಲಿನ ಮುಳ್ಳುಗಳು ಎಂದು ಗೊತ್ತಾಯಿತು. ಅಷ್ಟರಲ್ಲಾಗಲೇ ರಸ್ತೆ ಪಕ್ಕದ ಕಾಲುವೆಯಿಂದ 'ಬುಸ್... ಬುಸ್...' ಎನ್ನುವ ಶಬ್ದ ಕಿವಿಗೆ ಬಿತ್ತು. ಅದು ಹಾವಿನ ಶಬ್ದವಿರಬಹುದೆಂದು ಹೆಜ್ಜೆ ಹಿಂದಿರಿಸಿದೆ. ಬಳಿಕ ಧೈರ್ಯ ಮಾಡಿ ಕಾಲುವೆಯತ್ತ ಹೆಜ್ಜೆ ಹಾಕಿದೆ. ಅಲ್ಲಿ ಮುಳ್ಳುಹಂದಿಯೊಂದು ನಿಸ್ತೇಜವಾಗಿ ಬಿದ್ದಿತ್ತು. ಬಹುಶಃ ಅದು ರಸ್ತೆ ದಾಟುವಾಗ ಯಾವುದೋ ವಾಹನ ಬಡಿದು, ಅದರ ಮೈಯೆಲ್ಲಾ ಗಾಯವಾಗಿ ಕಾಲುವೆಗೆ ಬಿದ್ದಿರಬೇಕು. ಹೀಗಾಗಿಯೇ ಮೈಮೇಲಿನ ಮುಳ್ಳುಗಳೆಲ್ಲ ಕಿತ್ತು ರಸ್ತೆ ತುಂಬೆಲ್ಲಾ ಹರಡಿಕೊಂಡಿರಬಹುದು. ಗಾಯದ ಕಾರಣಕ್ಕೆ ಆ ನಿಶಾಚರಿ ಪ್ರಾಣಿ ಭಯದಿಂದ ಬುಸುಗುಡುತ್ತ, ಮುಂದಕ್ಕೆ ಚಲಿಸಲಾಗದೆ ಒದ್ದಾಡುತ್ತಿತ್ತು.

ಏನಾದರೂ ಮಾಡಿ ಮುಳ್ಳುಹಂದಿಯನ್ನು ಬದುಕಿಸಲೇಬೇಕು ಎಂದು ಯೋಚಿಸಿ, ಮಿತ್ರರ ಮೂಲಕ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ವಿಷಯ ಮುಟ್ಟಿಸಿದೆ. ತಾಸಿನೊಳಗೆ ಅಲ್ಲಿಗೆ ಬಂದ ಅಧಿಕಾರಿಗಳು ಅದಕ್ಕೆ ಪ್ರಥಮ ಚಿಕಿತ್ಸೆ ನೀಡಿ, ಅಡವಿಗೆ ಬಿಟ್ಟರು. ಮುಂದೆ ಅದು ಪೂರ್ಣ ಗುಣಮುಖವಾಗಿ ಬದುಕಿಕೊಂಡಿರಬಹುದು ಎನ್ನುವ ಆಶಾಭಾವ ನಮ್ಮದು. ರಸ್ತೆ ಅಪಘಾತದಲ್ಲಿ ಮನುಷ್ಯರಿಗೆ ತುರ್ತು ಚಿಕಿತ್ಸೆ ಸಿಗುವಂತೆ, ರಾತ್ರಿ ಸಮಯದಲ್ಲಿ ರಸ್ತೆ ದಾಟುವಾಗ ಗಾಯಗೊಳ್ಳುವ ಅದೆಷ್ಟೋ ಕಾಡುಪ್ರಾಣಿಗಳಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಸಿಗುವುದು ತೀರಾ ಕಮ್ಮಿ. ಅನೇಕ ಸಂದರ್ಭದಲ್ಲಿ ಅವು ಜನರ ಗಮನಕ್ಕೆ ಬರುವ ಮೊದಲೇ ಪ್ರಾಣಬಿಟ್ಟಿರುತ್ತವೆ.

–ಜಿ.ಎಂ. ಬೊಮ್ನಳ್ಳಿ







# ಮರೆಯಾದ ಹೊರಬೀಡು ಆಚರಣೆ

ಚಿಕ್ಕಂದಿನಲ್ಲಿದ್ದಾಗ ಹೊರಬೀಡು ಆಚರಣೆಯನ್ನು ಪ್ರತಿವರ್ಷವೂ ಮಾಡುತ್ತಿದ್ದೆವು. ಒಂದು ದಿವಸದ ಮಟ್ಟಿಗೆ ಊರನ್ನು ತೊರೆಯುವುದರಿಂದ ಊರಿಗೆ ಅಂಟಿರುವ ಕೆಟ್ಟ ರೋಗರುಜಿನಗಳು, ದುಷ್ಟ ಶಕ್ತಿಗಳು, ಕಂಟಕಗಳು ನಿವಾರಣೆಯಾಗುತ್ತವೆ ಎಂಬ ಬಲವಾದ ನಂಬಿಕೆ ನಮ್ಮ ಪೂರ್ವಿಕರಲ್ಲಿತ್ತು. ಹೀಗಾಗಿ, ವರ್ಷಕ್ಕೊಮ್ಮೆ ಈ ಹೊರಬೀಡನ್ನು ಆಚರಿಸುವ ಪದ್ಧತಿ ರೂಢಿಯಲ್ಲಿತ್ತು.

ಕಾಲ ಕ್ರಮೇಣ ಇದು ಪ್ರತಿ ವರ್ಷದ ಬದಲು ಐದು, ಹತ್ತು ವರ್ಷಕ್ಕೊಮ್ಮೆ ಆಚರಣೆಗೆ ಬಂತು. ಬಹಳ ಹಿಂದೆ ಮಲೇರಿಯಾ ಮತ್ತು ಕ್ಷಯ ರೋಗ ಇಡೀ ಊರಿಗೆ ಆವರಿಸಿದ್ದಾಗಲೂ ನಮ್ಮ ಹಿರಿಯರು ಈ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದು, ಆಗೆಲ್ಲ ಆಚರಣೆ ವೇಳೆ ಇಡೀ ಊರಿಗೆ ಊರೇ ಖಾಲಿಯಾಗುತ್ತಿತ್ತು. ಎಲ್ಲರೂ ತಮ್ಮ ಮನೆಗಳಿಗೆ ಬೀಗ ಹಾಕಿ, ಊರ ಹೊರಭಾಗದ ಹೊಲ, ತೋಟ, ಖಾಲಿ ಜಾಗಗಳಿಗೆ ಸ್ಥಳಾಂತರವಾಗುತ್ತಿದ್ದರು. ಅಲ್ಲಿ ಅಡುಗೆ ಮಾಡಿ ದೇವರಿಗೆ ನೈವೇದ್ಯ ಇಟ್ಟು ಪೂಜೆ ಸಲ್ಲಿಸಲಾಗುತ್ತಿತ್ತು. ಒಳಗೆ ಯಾರೂ ಬಾರದಂತೆ ಊರ ಪ್ರವೇಶ ದ್ವಾರದಲ್ಲಿ ಮುಳ್ಳಿನ ಬೇಲಿ ಹಾಕಿ ಬಂದ್ ಮಾಡಲಾಗುತ್ತಿತ್ತು. ಹೊರಗಡೆ ಒಂದೆಡೆ ಸೇರುತ್ತಿದ್ದ ಜನರು, ಒಟ್ಟಾಗಿ ಸೇರಿ ಅಡುಗೆ ಮಾಡಿ ಸವಿಯುತ್ತಿದ್ದರು. ಬಳಿಕ ಆಟ, ಹಾಡು ಸೇರಿದಂತೆ ಮನರಂಜನೆ ಕಾರ್ಯಕ್ರಮಗಳನ್ನು ನಡೆಸಿ ಸಂಜೆ ಊರಿಗೆ ವಾಪಸ್ ಆಗುತ್ತಿದ್ದರು.

ನಮ್ಮೂರು ಹಿರಿಯೂರು ಬಳಿಯ ಮದ್ದಿಹಳ್ಳಿ. ಊರ ದೇವರು ಮುತ್ತುರಾಯಸ್ವಾಮಿ. ಗ್ರಾಮ ದೇವರ ಜೊತೆಗೆ ಬೆಳಿಗ್ಗೆಯೇ ಊರು ಬಿಡುತ್ತಿದ್ದ ಜನರು ಸಂಜೆ ವೇಳೆಗೆಲ್ಲ ದೇವರ ಜೊತೆಗೆ ಊರು ಸೇರಿಕೊಳ್ಳುತ್ತಿದ್ದರು. ಹೊರಬೀಡು ಆಚರಣೆ ಮುಗಿದ ನಂತರ ಊರ ಪ್ರವೇಶ ದ್ವಾರದಲ್ಲಿ ಹಾಕಿದ್ದ ಬೇಲಿ ತೆಗೆದು, ಊರೊಳಗೆ ತೆರಳಿ ದೇವರಿಗೆ ಪೂಜೆ ಸಲ್ಲಿಸಲಾಗುತ್ತಿತ್ತು.

–ಎಂ. ಪರಮೇಶ್ವರ, ಹಿರಿಯೂರು



# ಇಂದಿಗೂ ಇದೆ ಅಂದಿನ ಮೇನೆ

ಮೇನೆಗೆ ಹಿಂದಿನ ಕಾಲದಲ್ಲಿ ವಿಶೇಷವಾದ ಮಹತ್ವವಿತ್ತು. ಪಲ್ಲಕ್ಕಿಗಳು ಅರಮನೆಯ ರಾಜರು ಹೆಚ್ಚಾಗಿ ಬಳಸುತ್ತಿದ್ದರು. ರಾಜ ಮಹಾರಾಜರು ದೇವಸ್ಥಾನ ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಹೋಗಿ ಬರಲು ಚಿತ್ರದಲ್ಲಿ ಕಾಣುತ್ತಿರುವಂತಹ ಪಲ್ಲಕ್ಕಿಗಳನ್ನೇ ಬಳಸುತ್ತಿದ್ದರು. ಅಂತಹದ್ದೇ ಒಂದು ಪಲ್ಲಕ್ಕಿಯು ವಿಟ್ಲ ಅರಮನೆಯಲ್ಲಿದೆ. ಅದನ್ನು ಹೊರಲು ಆರು ಮಂದಿ ಬೇಕಿತ್ತು. ಈ ಪಲ್ಲಕ್ಕಿ ಹೊರುವವರ ಜೀವನ ಸಾಗಿಸಲು ಇಂತಿಷ್ಟು ಭೂಮಿಯನ್ನು ರಾಜರು ಕೊಡುತ್ತಿದ್ದರಂತೆ. ಇಂದಿಗೂ ಗಮನ ತನ್ನ ಕಡೆಗೆ ಸೆಳೆಯುವಂತಹ ಶಕ್ತಿ ಈ ಪಲ್ಲಕ್ಕಿಗಿದೆ.

–ಪೃಥ್ವಿ ರಾಜ್